# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-570 006.

ಸಂಖ್ಯೆ: ಕರಾಮುವಿ/ಅಸಾವಿ/01-23/2020-21 ದಿನಾಂಕ: 29-03-2021

## ಸಭಾ ನಡವಳಿ

**ವಿಷಯ :** ದಿನಾಂಕ: 26-03-2021 ರಂದು ಮಧ್ಯಾಹ್ನ 3:00 ಘಂಟೆಯ ಸಮಯದಲ್ಲಿ ಕೊರತೆಯಾಗಿರುವ ಅಧ್ಯಯನ ಸಾಮಗ್ರಿಗಳ ಮುದ್ರಣ ಸಂಬಂಧ ಅಲ್ಪಾವಧಿ ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್‌ಗೆ ಸಂಬಂಧಿಸಿದಂತೆ ನಡೆದ ಪೂರ್ವಭಾವಿ (Pre-Bid) ಸಭೆಯ ನಡವಳಿ.

### ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು

| ಕ್ರ ಸಂ | ಸದಸ್ಯರುಗಳು | | ಸಹಿ |
|---|---|---|---|
| 1 | ಕುಲಸಚಿವರು, ಕರಾಮುವಿ. | ಅಧ್ಯಕ್ಷರು | |
| 2 | ಹಣಕಾಸು ಅಧಿಕಾರಿಗಳು, ಕರಾಮುವಿ. | ಸದಸ್ಯರು | (signature) |
| 3 | ಡೀನ್ ಶೈಕ್ಷಣಿಕ, ಕರಾಮುವಿ. I/C | ಸದಸ್ಯರು | (signature) |
| 4 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರಾಮುವಿ. | ಸದಸ್ಯರು | (signature) |
| 5 | ಉಪಕುಲಸಚಿವರು, ಅಧ್ಯಯನ ಸಾಮಗ್ರಿ, ಕರಾಮುವಿ. | ಸಂಚಾಲಕರು | (signature) |

### ಸಭೆಯಲ್ಲಿ ಹಾಜರಿದ್ದ ಮುದ್ರಕರ ವಿವರ

| ಕ್ರ ಸಂ | ಮುದ್ರಣಾಲಯದ ಹೆಸರು |
|---|---|
| 1 | ಅಭಿಮಾನಿ ಪಬ್ಲಿಕೇಷನ್ಸ್, ಬೆಂಗಳೂರು. |
| 2 | ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್, ಬೆಂಗಳೂರು. |
| 3 | ವೆಂಕಟೇಶ್ವರ ಎಂಟರ್‌ಪ್ರೈಸಸ್, ಬೆಂಗಳೂರು. |
| 4 | ಸುಬ್ರಮಣ್ಯೇಶ್ವರ ಬುಕ್‌ಡಿಪೋ, ಬೆಂಗಳೂರು. |
| 5 | ಮಣಿಪಾಲ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್, ಮಣಿಪಾಲ್. |

ಕುಲಸಚಿವರು 2020-21 ನೇ ಸಾಲಿಗೆ ಕೊರತೆಯಾಗುವ ಅಧ್ಯಯನ ಸಾಮಗ್ರಿಗಳ ಮುದ್ರಣ ಸಂಬಂಧ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆ ಹಾಗು ಮಾನ್ಯ ಕುಲಪತಿಗಳ ಅನುಮೋದನೆಯಂತೆ ಆಹ್ವಾನಿಸಲಾಗಿರುವ ಅಲ್ಪಾವಧಿ ಟೆಂಡರ್ ಅನ್ನು ದಿನಾಂಕ: 18-03-2021 ರಂದು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿರುವ ಟೆಂಡರ್ ದಾಖಲಾತಿಗಳ ಸಂಬಂಧ ಸ್ಪಷ್ಟೀಕರಣಗಳ ಕೋರಿಕೆಗಾಗಿ ಹಾಜರಿರುವ ವಿವಿಧ ಮುದ್ರಕರು ಹಾಗೂ ಟೆಂಡರ್ ರಚನಾ ಸಲಹಾ ಮತ್ತು ಪರಿಶೀಲನಾ ಸಮಿತಿಯ ಸದಸ್ಯರನ್ನು ಸ್ವಾಗತಿಸುವ ಮೂಲಕ ಸಭೆ ಪ್ರಾರಂಭಿಸಲಾಯಿತು.

ಕುಲಸಚಿವರು ಸಭೆಯಲ್ಲಿ ಹಾಜರಿರುವ ಮುದ್ರಕರನ್ನು ಟೆಂಡರ್ ದಾಖಲಾತಿಗಳಿಗೆ ಸಂಬಂಧಿಸಿದಂತೆ ಸ್ಪಷ್ಟೀಕರಣವಿದ್ದಲ್ಲಿ ಸಭೆಗೆ ಲಿಖಿತ ರೂಪದಲ್ಲಿ ಮಂಡಿಸುವಂತೆ ಸೂಚಿಸಲಾಯಿತು.

ಸಭೆಯಲ್ಲಿ ಹಾಜರಿದ್ದ ಮೇಲ್ಕಂಡ ಮುದ್ರಣಾಲಯಗಳ ಮುದ್ರಕರುಗಳಲ್ಲಿ ಅಭಿಮಾನಿ ಪಬ್ಲಿಕೇಷನ್ಸ್, ಬೆಂಗಳೂರು ಹಾಗೂ ಮಣಿಪಾಲ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್, ಮಣಿಪಾಲ್. ಇವರುಗಳನ್ನು ಹೊರತುಪಡಿಸಿ ಉಳಿದ ಮೂರು ಮುದ್ರಣಾಲಯಗಳ ಮುದ್ರಕರು ಸ್ಪಷ್ಟೀಕರಣ ಕೋರಿ ಲಿಖಿತ ರೂಪದಲ್ಲಿ ಮನವಿ ಸಲ್ಲಿಸಿದರು.

ಕುಲಸಚಿವರು ಸದರಿ ಮನವಿಗಳನ್ನು ಪರಿಶೀಲಿಸಿ ಟೆಂಡರ್ ಸಮಿತಿಯು ಅಗತ್ಯ ಕ್ರಮ ಕೈಗೊಳ್ಳುವುದೆಂದು ತಿಳಿಸಿ ಮುದ್ರಕರನ್ನು ಸಭೆಯಿಂದ ಬೀಳ್ಕೊಟ್ಟರು.

ಮುದ್ರಕರ ಮನವಿಗಳನ್ನು ಸಮಿತಿಯು ಕೂಲಂಕುಶವಾಗಿ ಪರಿಶೀಲಿಸಿ ಕೆಲವು ಅಂಶಗಳಿಗೆ ತಿದ್ದುಪಡಿ ಮಾಡಿ, ತಿದ್ದುಪಡಿಯಾದ ಅಂಶಗಳ ಬಗ್ಗೆ CORRIGENDUM ಅನ್ನು ಮಾನ್ಯ ಕುಲಪತಿಗಳ ಅನುಮೋದನೆ ಪಡೆದು ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವಂತೆ ಶಿಫಾರಸ್ಸು ಮಾಡಿತು.

ಈ ಸಂಬಂಧ ಮೂರು ಮುದ್ರಣಾಲಯಗಳು ಸಲ್ಲಿಸಿದ ಮನವಿಯಲ್ಲಿನ ಅಂಶಗಳನ್ನು ಪರಿಶೀಲಿಸಿದ ಸಮಿತಿಯು ಈ ಕೆಳಗೆ ನಮೂದಿಸಿದ ಅಂಶಗಳಿಗೆ ತಿದ್ದುಪಡಿ ಮಾಡಿ ಉಳಿದಂತೆ ಯಥಾವತ್ತಾಗಿ ಮುಂದುವರಿಸುವಂತೆ ಸಮಿತಿಯು ಶಿಫಾರಸ್ಸು ಮಾಡಿತು.

| Sl. No. | Sl no Specified in Tender Document | Existing Terms & Conditions Of the tender Documents | Partial Modification allowed in the tender documents |
|---|---|---|---|
| 01 | Page number 02, Sl no 08 | The bidder should have printed SLM for Distance learning of any University or similar institutions of university level during the last three years. Text in single colour on 70 GSM White Maplitho Paper and Cover 'A' grade on 220 gsm Art Card with Multi colour printing with matt lamination. | The bidder should have printed SLM for Distance learning of any University or similar institutions of university level during the last three years. Text in single colour on 70 GSM White Maplitho Paper and Cover 'A' grade on 220 gsm Art Card with Multi colour printing with matt lamination or UV coating. |

| | | | |
|---|---|---|---|
| 02 | Page number 04, Sl no 31 | The successful bidder (in case of SSI/MSME) has to pay a security deposit of 3% of tender amount DD drawn in favour of the Finance Officer, Karnataka State Open University, along with agreement. EMD amount of successful bidder will be adjusted to security deposit. | The successful bidder (in case of SSI/MSME) has to pay a security deposit of 3% of tender amount BG/DD drawn in favour of the Finance Officer, Karnataka State Open University, along with agreement. EMD amount of successful bidder will be adjusted to security deposit. |
| 03 | **ANNEXURE–IV** Technical bid, Page number 08, Sl no 07 | Name of the bank with which the printer transacting the banking business enclose the solvency certificate obtained from the nationalized bank for rupees ten lacks, it shall be concerning to the tender invited for printing study materials. | Name of the bank with which the printer transacting the banking business enclose the solvency certificate obtained from the nationalized bank/scheduled bank for rupees ten lacks, it shall be concerning to the tender invited for printing study materials. |

ಮೇಲಿನ ಮೂರು ಅಂಶಗಳಿಗೆ ತಿದ್ದುಪಡಿ ಮಾಡಿ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ADDENDUM ಅಪ್‌ಲೋಡ್ ಮಾಡಬಹುದೆಂದು ಟೆಂಡರ್ ರಚನಾ ಸಲಹಾ ಮತ್ತು ಪರಿಶೀಲನಾ ಸಮಿತಿಯು ಶಿಫಾರಸ್ಸಿನೊಂದಿಗೆ ಸದರಿ ಅಂಶಗಳನ್ನು ಕಡತದಲ್ಲಿ ದಾಖಲಿಸಿ ಮಾನ್ಯ ಕುಲಪತಿಗಳ ಅನುಮೋದನೆ ಪಡೆಯಲು ಶಿಫಾರಸ್ಸು ಮಾಡಿತು.

ಸಮಿತಿ ಸೂಚಿಸಿದ ಶಿಫಾರಸ್ಸುಗಳನ್ನು ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವಂತೆ ಸಮಿತಿ ಸಂಚಾಲಕರಾದ ಉಪಕುಲಸಚಿವರು (ಅಧ್ಯಯನ ಸಾಮಗ್ರಿ) ಇವರಿಗೆ ನಿರ್ದೇಶನ ನೀಡಿತು.

ಅಂತಿಮವಾಗಿ ಕುಲಸಚಿವರು ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಗೆ ವಂದನೆ ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು

ಸಂಚಾಲಕರು